ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗರಸ್ತೆ, ಬೆಂಗಳೂರು-1**

ಸಂಖ್ಯೆ:ಶಾ.ಶಿ/ಎನ್.ಪಿ.ಎಸ್/01/2020-21 ದಿನಾಂಕ:02/01/2021

**ಸುತ್ತೋಲೆ**

**ವಿಷಯ:** ಎನ್.ಪಿ.ಎಸ್‌ಗೆ ಒಳಪಟ್ಟ ನೌಕರರ ಬ್ಯಾಕ್‌ಲಾಗ್ ಪಾವತಿಗಾಗಿ ಇಲ್ಲಿಯವರೆವಿಗೂ ಷೆಡ್ಯೂಲ್IV ಮತ್ತುV ಗಳನ್ನು ಸಲ್ಲಿಸದೇಇರುವ ಬಗ್ಗೆ.

**ಉಲ್ಲೇಖ:**1. ಮಾನ್ಯ ಖಜಾನೆ ಆಯುಕ್ತರ ನಡೆಸಿದ ಸಭೆ ದಿನಾಂಕ:29.12.2020.

2. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ: ಹೆಚ್.ಅರ್.ಎಂ.ಎಸ್/ಸುತ್ತೋಲೆ/1/2020-21,ದಿನಾಂಕ:23.11.2020 ಮತ್ತುದಿನಾಂಕ:26/11/2020

*********

ಎನ್.ಪಿ.ಎಸ್ ಬ್ಯಾಕ್‌ಲಾಗ್ ಮೊತ್ತವನ್ನು ಪಾವತಿಸುವ ಸಂಬಂಧ ಉಲ್ಲೇಖ(2)ರಲ್ಲಿ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದ್ದು, ಎನ್.ಪಿ.ಎಸ್ ಬ್ಯಾಕ್‌ಲಾಗ್ ಮೊತ್ತವನ್ನು ಹೆಚ್.ಅರ್.ಎಂ.ಎಸ್ ತಂತ್ರಾಂಶದಲ್ಲಿ ಜನರೇಟ್‌ಮಾಡಿ K-2 ಮುಖಾಂತರ ಮಾಹಿತಿಯನ್ನು submit ಮಾಡಬೇಕಿದೆ. ಉಲ್ಲೇಖ(1) ರಲ್ಲಿ ಎನ್.ಪಿಎಸ್ ಬ್ಯಾಕ್‌ಲಾಗ್ ಪ್ರಕರಣಗಳನ್ನು ಇತ್ಯರ್ಥಪಡಿಸುವ ಸಂಬಂಧ ದಿನಾಂಕ: 29.12.2020 ರ ಪೂರ್ವಾಹ್ನ ಖಜಾನೆ ಆಯುಕ್ತರ ಕಛೇರಿ, ನೂತನ ಕಟ್ಟಡ, ಆರ್.ಸಿ. ಕಾಲೇಜ್ ಹತ್ತಿರ, ಬೆಂಗಳೂರು ಇಲ್ಲಿ ಖಜಾನೆ ಆಯುಕ್ತರ ಅಧ್ಯಕ್ಷತೆಯ ಸಭೆಯಲ್ಲಿ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಯಿತು.

1. ದಿನಾಂಕ: 10.12.2020ರಂತೆ ಒಟ್ಟು 10579 ಪ್ರಕರಣಗಳ ಪೈಕಿ 852 ಪ್ರಕರಣಗಳು ಮಾತ್ರ ಸರಿಯಾಗಿದ್ದು, ಸದರಿ ಪ್ರಕರಣಗಳನ್ನು ಕೆ-2ನಲ್ಲಿ ಅನುಮೋದಿಸಲಾಗಿದೆ.
2. ಒಟ್ಟು 5053 ಪ್ರಕರಣಗಳು ಕೆ-2 ನಲ್ಲಿ ಸ್ವೀಕೃತಗೊಂಡಿದ್ದು, ಎನ್.ಪಿ.ಎಸ್. ಘಟಕದಿಂದ ಕೆಳಕಂಡ ಅಂಶಗಳನ್ವಯ ನ್ಯೂನ್ಯತೆಯಿಂದಕೂಡಿದ್ದ ಪ್ರಕರಣಗಳನ್ನು ತಿರಸ್ಕರಿಸಿ ಉಳಿದ ಪ್ರಕರಣಗಳನ್ನು ಅನುಮೋದಿಸಲಾಗುವುದೆಂದು ತಿಳಿಸಿರುತ್ತಾರೆ.
   - ಮೂಲವೇತನದಲ್ಲಿ ವ್ಯತ್ಯಾಸ
   - ತುಟ್ಟಿಭತ್ಯೆಯಲ್ಲಿನ ವ್ಯತ್ಯಾಸ (ನಿಯಮಾನುಸಾರ)
   - ಸರ್ಕಾರಿ ವಂತಿಕೆಯಲ್ಲಿ ವ್ಯತ್ಯಾಸ(ಶೇ.10%ರ ದರದಲ್ಲಿ)
   - ಬಡ್ಡಿಯಲ್ಲಿನ ವ್ಯತ್ಯಾಸ (ಶೇ. 8%ರ ದರದಲ್ಲಿ)
3. ಕೆ-2ಗೆ ಸ್ವೀಕೃತಗೊಳ್ಳದೇ ಬಾಕಿ ಉಳಿದಿರುವ ಒಟ್ಟು 5526 ಪ್ರಕರಣಗಳನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಸೃಜಿಸಿ Schedule –IV ಅನ್ನುManual Calculation (Manual Calculation Soft copyಯನ್ನು ಇಲಾಖೆಯ ಜಾಲತಾಣದಲ್ಲಿ ನೀಡಿಲಾಗಿದೆ) ಮಾಡಿ ಪರಿಶೀಲಿಸಿ ತದನಂತರ ಕೆ-2ಗೆ ಕಳುಹಿಸಲು ಕ್ರಮವಹಿಸುವಂತೆ ಎಲ್ಲಾ ಡಿ.ಡಿ.ಓ.ಗಳಿಗೆ ಸೂಚಿಸುವಂತೆ ತಿಳಿಸಿರುತ್ತಾರೆ. ಒಂದು ವೇಳೆ ಹೊಂದಾಣಿಕೆಯಾಗದಿದ್ದರೆ, ಹೆಚ್.ಆರ್.ಎಂ.ಎಸ್. ಮುಖಾಂತರ ಸರಿಪಡಿಸಿಕೊಂಡು ನಂತರ ಕೆ-2 ಗೆ ಕಳುಹಿಸಲು ತಿಳಿಸಿರುತ್ತಾರೆ. ಹಾಗೂ **hard copy ಯನ್ನು ಡಿಡಿಓಗಳ ಮುಖಾಂತರ ಜಿಲ್ಲಾ ವ್ಯಾಪ್ತಿಯ ಸಹಾಯಕ ನಿರ್ದೇಶಕರು, ಸಣ್ಣ ಉಳಿತಾಯ ಖಾತೆ ಇಲಾಖೆ ರವರಿಗೆ ಸಲ್ಲಿಸಲು ಸೂಚಿಸಿದೆ.**

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸಂಬಂಧಪಟ್ಟ ಎಲ್ಲಾ ಡಿ.ಡಿ.ಓ.ಗಳ ಮುಂದಿನ ಅಗತ್ಯ ಕ್ರಮವಹಿಸಲು ತಿಳಿಸಿದೆ. ಈ ಸಂಬಂಧ ಮುಂದೆ ಯಾವುದೇ ನ್ಯಾಯಾಲಯ ಪ್ರಕರಣಗಳು ಉದ್ಭವಿಸಿದಲ್ಲಿ ಸಂಬಂಧಿಸಿದ ಡಿಡಿಓಗಳೇ ಪೂರ್ಣ ಹೊಣೆಗಾರರಾಗಿರುತ್ತಾರೆ ಎಂದು ತಿಳಿಸಿದೆ.

(ವಿ.ಅನ್ಬುಕುಮಾರ್,ಭಾ.ಆ.ಸೇ)
ಆಯುಕ್ತರು,
ಸಾ.ಶಿ.ಇ

ಪ್ರತಿಯನ್ನು:

1. ಖಜಾನೆ ಆಯುಕ್ತರು, ಖಜಾನೆ ಆಯುಕ್ತರ ಕಾರ್ಯಾಲಯ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಮುಂದಿನ ಕ್ರಮಕ್ಕಾಗಿ.
2. ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಮುಂದಿನ ಕ್ರಮಕ್ಕಾಗಿ.
3. ಅಪರಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ವಿಭಾಗರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಮುಂದಿನ ಕ್ರಮಕ್ಕಾಗಿ.
4. ಅಪರಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಮುಂದಿನ ಕ್ರಮಕ್ಕಾಗಿ.
5. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಮುಂದಿನ ಕ್ರಮಕ್ಕಾಗಿ.
6. ಸಹ ನಿರ್ದೇಶಕರು(ಶಾಲಾ ಶಿಕ್ಷಣ) ಪ್ರಭಾರಿ ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಆಯುಕ್ತರಿಪ ಆರ್ಥಿಕ ಸಲಹೆಗಾರರು, ಆಯುಕ್ತರ ಕಛೇರಿ ರವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
7. ಎಲ್ಲಾಜಿಲ್ಲಾ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಮುಂದಿನ ಕ್ರಮಕ್ಕಾಗಿ.
8. ಸಹಾಯಕ ನಿರ್ದೇಶಕರು (ಕೇಂದ್ರ ಸ್ಥಾನ), ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಅಗತ್ಯ ಮುಂದಿನ ಕ್ರಮಕ್ಕಾಗಿ.
9. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಮುಂದಿನ ಕ್ರಮಕ್ಕಾಗಿ.
10. ಎಲ್ಲಾ ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢ ಶಾಲೆ ರವರಿಗೆ (ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ) ಅಗತ್ಯ ಮುಂದಿನ ಕ್ರಮಕ್ಕಾಗಿ.